**All India Radio: Bangalore**
**National Bulletins In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**30.06.2025 / 19.35 hrs**
**<><*<><>*><>**

ಮುಖ್ಯಾಂಶಗಳು

೧. ತಂತ್ರಜ್ಞಾನದಿಂದ ಪಶು ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಪರಿವರ್ತನೆ ಸಾಧ್ಯ- ರಾಷ್ಟ್ರಪತಿ ದ್ರೌಪದಿ ಮುರ್ಮು

೨. ಬುಧವಾರದಿಂದ ಐದು ರಾಷ್ಟ್ರಗಳ ಪ್ರವಾಸ ಕೈಗೊಳ್ಳಲಿರುವ ಪ್ರಧಾನಿ ನರೇಂದ್ರ ಮೋದಿ

೩. ೨೦೨೪-೨೫ನೇ ಹಣಕಾಸು ವರ್ಷದಲ್ಲಿ ಸಾರ್ವಕಾಲಿಕ ಗರಿಷ್ಠ ಜಿಎಸ್‌ಟಿ ಸಂಗ್ರಹ

೪. ಹೈದರಾಬಾದ್ ರಾಸಾಯನಿಕ ಕಾರ್ಖಾನೆಯಲ್ಲಿ ಸ್ಫೋಟ; ಕನಿಷ್ಠ ೧೨ ಕಾರ್ಮಿಕರ ಸಾವು

**<><*<><>*><>**

ಪ್ರಾಣಿಗಳ ಸೇವೆ ಸಲ್ಲಿಸುವುದು ನೈತಿಕ ಜವಾಬ್ದಾರಿಯಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದಿಸಿದ್ದಾರೆ. ಎರಡು ದಿನಗಳ ಉತ್ತರಪ್ರದೇಶ ಭೇಟಿಯಲ್ಲಿರುವ ರಾಷ್ಟ್ರಪತಿ ಬರೇಲಿಯಲ್ಲಿಂದು ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯ ೧೧ನೇ ಘಟಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಪಶುವೈದ್ಯಕೀಯ ವೃತ್ತಿಪರರು ತಮ್ಮ ತರಬೇತಿ ಮತ್ತು ಧ್ಯೇಯದ ಕುರಿತು ನಿಷ್ಠೆ ಹೊಂದಿರುವುದು ಅಗತ್ಯವಾಗಿದೆ. ಗ್ರಾಮೀಣ ಭಾಗಗಳಲ್ಲೂ ಪಶುವೈದ್ಯಕೀಯ ಸೇವೆಗಳು ಲಭ್ಯವಾಗಿಸುವ ಅಗತ್ಯದ ಕುರಿತು ಒತ್ತಿ ಹೇಳಿದರು. ಇತರೆ ಕ್ಷೇತ್ರಗಳಂತೆ ಪಶು ವೈದ್ಯಕೀಯ ಕ್ಷೇತ್ರದಲ್ಲೂ ತಂತ್ರಜ್ಞಾನ ಕ್ರಾಂತಿಕಾರಿ ಪರಿವರ್ತನೆ ತರುವ ಕ್ಷಮತೆ ಹೊಂದಿದೆ. ತಂತ್ರಜ್ಞಾನದ ಬಳಕೆಯಿಂದ ದೇಶದ ಪಶು ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆಯನ್ನು ಸಬಲೀಕರಣಗೊಳಿಸಬಹುದು. ಜಿನೋಮ್ ಮಾರ್ಪಾಡು, ಎಂಬ್ರಾಯ್ ಕಸಿ ತಂತ್ರಜ್ಞಾನನಂತಹ ಆಧುನಿಕ ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನ ಬಳಕೆಯಿಂದ ಈ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಸಾಧ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ಧ್ವನಿ : ರಾಷ್ಟ್ರಪತಿ ದ್ರೌಪದಿ ಮುರ್ಮು

ನಂತರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗೋರಖ್‌ಪೂರ್‌ನ ಏಮ್ಸ್‌ನ ಮೊದಲ ಘಟಿಕೋತ್ಸವದಲ್ಲಿ ಪಾಲ್ಗೊಂಡು, ವಿದ್ಯಾರ್ಥಿಗಳಿಗೆ ಪದಕ ಪ್ರದಾನ ಮಾಡಿದರು. ಪ್ರವಾಸದ ಎರಡನೇ ದಿನವಾದ ನಾಳೆ, ರಾಷ್ಟ್ರಪತಿ ಅವರು ಉತ್ತರ ಪ್ರದೇಶದ ಮಹಾಯೋಗಿ ಗುರು ಗೋರಖನಾಥ್ ಆಯುಷ್ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿದ್ದಾರೆ. ಬಳಿಕ ಅವರು ಮಹಾಯೋಗಿ ಗೊರಖನಾಥ್ ವಿಶ್ವವಿದ್ಯಾಲಯದ ಆರೋಗ್ಯದಾಮ್ ಆವರಣದಲ್ಲಿ ನೂತನ ಶೈಕ್ಷಣಿಕ ಸಂಕೀರ್ಣ,

ಸಭಾಂಗಣ, ಪಂಚಕರ್ಮ ಕೇಂದ್ರ ಉದ್ಘಾಟನೆ ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯದ ಶಿಲಾನ್ಯಾಸ ನೆರವೇರಿಸಲಿದ್ದಾರೆ.

<><*<><>*><>

ಇತ್ತೀಚಿನ ದಿನಗಳಲ್ಲಿ ಪ್ರಜಾಪ್ರಭುತ್ವದ ದೇಗುಲಗಳಲ್ಲಿ ನಡೆಯುತ್ತಿರುವ ಕೃತ್ಯಗಳು ಕಳವಳಕಾರಿ ಸಂಗತಿ ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದ್ದಾರೆ. ರಾಜಸ್ಥಾನದ ಜೈಪುರದಲ್ಲಿಂದು ಪ್ರಗತಿಶೀಲ ಮಂಚ್ ಆಯೋಜಿಸಿದ್ದ 'ಸ್ನೇಹ ಮಿಲನ್ ಸಮಾರೋಪ' ಸಮಾರಂಭದಲ್ಲಿ ಭಾಗವಹಿಸಿದ್ದ ಅವರು, ಶಾಸಕಾಂಗಗಳು ಅತ್ಯುನ್ನತ ರೀತಿಯಲ್ಲಿ ವರ್ತಿಸಬೇಕು. ಆದರೆ ಇಂದಿನ ದಿನಗಳಲ್ಲಿ, ರಾಜಕೀಯದ ವಾತಾವರಣ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಆರೋಗ್ಯಕ್ಕೆ ಅನುಕೂಲಕರವಾಗಿಲ್ಲ. ಇದು ಸಾವಿರಾರು ವರ್ಷಗಳ ಸಂಸ್ಕೃತಿಗೆ ಹೊಂದಿಕೆಯಾಗದಿರುವುದು ಕಳವಳಕಾರಿಯ ಸಂಗತಿ ಎಂದರು. ವಿರೋಧ ಪಕ್ಷವು ದೇಶಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತವೆ. ವಿರೋಧ ಪಕ್ಷ ಎಂದರೆ, ಅದರಲ್ಲಿ ದ್ವೇಷ ಇರಬೇಕು, ಬಿರುಕು ಇರಬೇಕು ಎನ್ನುವುದು ಅರ್ಥವಲ್ಲ. ವಿರೋಧ ಪಕ್ಷ ಎದುರಾಳಿ ಪಕ್ಷವಲ್ಲ ಎಂಬುದನ್ನು ಮನಗಾಣಬೇಕು. ಪ್ರಜಾಪ್ರಭುತ್ವದಲ್ಲಿ, ಅಭಿವ್ಯಕ್ತಿ, ಚರ್ಚೆ, ಸಂವಾದದ ಅವಶ್ಯಕತೆಯಿದ್ದು, ಆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದರು.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು, ಬುಧವಾರದಿಂದ ಘಾನಾ, ಟ್ರಿನಿಡಾಡ್ ಮತ್ತು ಟೊಬಾಗೊ, ಅರ್ಜೆಂಟಿನಾ, ಬ್ರೆಜಿಲ್ ಹಾಗೂ ನಮಿಬಿಯಾಗೆ ಐದು ರಾಷ್ಟ್ರಗಳ ಭೇಟಿ ಆರಂಭಿಸಲಿದ್ದಾರೆ. ಈ ಕುರಿತು ನವದೆಹಲಿಯಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದ ವಿದೇಶಾಂಗ ಸಚಿವಾಲಯ ಕಾರ್ಯದರ್ಶಿ ದಮ್ಮು ರವಿ, ಪ್ರಧಾನಿಯವರು ತಮ್ಮ ಐದು ರಾಷ್ಟ್ರಗಳ ಪ್ರವಾಸದ ಮೊದಲ ಚರಣದಲ್ಲಿ, ಜುಲೈ ೨ ಮತ್ತು ೩ ರಂದು ಘಾನಾಗೆ ಭೇಟಿ ನೀಡಲಿದ್ದಾರೆ. ಇದು ಘಾನಾಗೆ ಅವರ ಮೊದಲ ದ್ವಿಪಕ್ಷೀಯ ಭೇಟಿಯಾಗಿದೆ ಎಂದು ತಿಳಿಸಿದ್ದಾರೆ. ಭೇಟಿ ಸಮಯದಲ್ಲಿ ಪ್ರಧಾನಿಯವರು ಘಾನಾ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಈ ವೇಳೆ, ಉಭಯ ರಾಷ್ಟ್ರಗಳ ನಡುವೆ ಇಂಧನ, ರಕ್ಷಣಾ ಸಹಯೋಗ, ಆರ್ಥಿಕ ಮತ್ತು ಅಭಿವೃದ್ಧಿ ಸಹಕಾರ ಪಾಲುದಾರಿಕೆಯನ್ನು ಹೆಚ್ಚಿಸುವ ಕುರಿತು ಚರ್ಚೆ ನಡೆಯುವ ಸಾಧ್ಯತೆಯಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

<><*<><>*><>

ಉಕ್ಕು ವಲಯದಲ್ಲಿ ಜಾಗತಿಕ ನಾಯಕನಾಗುವ ಭಾರತದ ಪ್ರಯಾಣವನ್ನು ನೀತಿ ಮತ್ತು ನಾವೀನ್ಯತೆ ಹೇಗೆ ರೂಪಿಸುತ್ತಿದೆ ಎಂಬುದರ ಕುರಿತು ಪ್ರಧಾನಿ ನರೇಂದ್ರ ಮೋದಿ ಇಂದು ಲೇಖನವೊಂದನ್ನು ಹಂಚಿಕೊಂಡಿದ್ದಾರೆ. ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಸಾಮಾಜಿಕ ಮಾಧ್ಯಮ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಪ್ರಧಾನಿ, ಮೂಲಸೌಕರ್ಯ ಮತ್ತು ರಕ್ಷಣೆಯಿಂದ ಶುದ್ಧ ಇಂಧನದವರೆಗೆ ಉಕ್ಕು, ಉದಯೋನ್ಮುಖ ಭಾರತದ ಬೆನ್ನೆಲುಬಾಗಿದೆ ಎಂದು ಹೇಳಿದ್ದಾರೆ. ಹೆದ್ದಾರಿಗಳಿಂದ ಹೈಸ್ಪೀಡ್ ರೈಲು, ಮೆಟ್ರೋ ಜಾಲತಾಣಗಳಿಂದ ನವೀಕರಿಸಬಹುದಾದ ಉದ್ಯಾನವನಗಳು, ಎಲೆಕ್ಟ್ರಿಕ್ ವಾಹನಗಳಿಂದ ರಕ್ಷಣಾ ಕ್ಷೇತ್ರದವರೆಗೆ ಉಕ್ಕು, ಭಾರತದ ಮೂಲಸೌಕರ್ಯ ಕ್ರಾಂತಿಯ ಪ್ರಮುಖ ಆಧಾರವಾಗಿದೆ ಎಂದಿದ್ದಾರೆ. ದೇಶೀಯವಾಗಿ ತಯಾರಿಸಿದ ಕಬ್ಬಿಣ ಮತ್ತು ಉಕ್ಕು ಉತ್ಪನ್ನಗಳ ನೀತಿ ಮತ್ತು ಉತ್ಪಾದನೆಗೆ ಸಂಬಂಧಿಸಿದ ಪ್ರೋತ್ಸಾಹಗಳಂತಹ ದೂರದೃಷ್ಟಿಯ ಸುಧಾರಣೆಗಳ ಮೂಲಕ ದೇಶವು, ಸಾಮರ್ಥ್ಯ, ಸ್ವಾವಲಂಬನೆ ಮತ್ತು ಹಸಿರು ಉಕ್ಕಿನ ನಾವೀನ್ಯತೆಗಳನ್ನು ಹೆಚ್ಚಿಸಿದೆ ಎಂದು ಪ್ರಧಾನಿ ನರೇಂದ್ರ ತಿಳಿಸಿದ್ದಾರೆ.

<><*<><>*><>

೨೦೨೪-೨೫ ನೇ ಹಣಕಾಸು ವರ್ಷದಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹ ಕಳೆದ ಐದು ವರ್ಷಗಳಲ್ಲಿ ದ್ವಿಗುಣಗೊಂಡು ಸಾರ್ವಕಾಲಿಕ ಗರಿಷ್ಠ ೨೨.೮ ಲಕ್ಷ ಕೋಟಿ ರೂಪಾಯಿ ತಲುಪಿದೆ. ೨೦೨೦-೨೧ ರಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹವು, ೧೧.೩೭ ಲಕ್ಷ ಕೋಟಿ ರೂಪಾಯಿಗಳಷ್ಟಿತ್ತು. ಜಿಎಸ್‌ಟಿ ದತ್ತಾಂಶದ ಪ್ರಕಾರ, ಸರಾಸರಿ ಮಾಸಿಕ ಜಿಎಸ್‌ಟಿ ಸಂಗ್ರಹ ೧.೮೪ ಲಕ್ಷ ಕೋಟಿ ರೂಪಾಯಿಗಳಷ್ಟಿತ್ತು. ಜಿಎಸ್‌ಟಿ ಜಾರಿಗೆ ಬಂದು ನಾಳೆಗೆ ೮ ವರ್ಷಗಳು ಪೂರೈಸಲಿದೆ. ಆರ್ಥಿಕ ಏಕೀಕರಣದತ್ತ ಪ್ರಮುಖ ಹೆಜ್ಜೆಯಾಗಿ ೨೦೧೭ರಲ್ಲಿ ಪರಿಚಯಿಸಲಾದ ಜಿಎಸ್‌ಟಿ, ಪರೋಕ್ಷ ತೆರಿಗೆಗಳ ಜಟಿಲತೆಯನ್ನು ಒಂದೇ, ಏಕೀಕೃತ ವ್ಯವಸ್ಥೆಯೊಂದಿಗೆ ಬದಲಾಯಿಸಿತು. ೧ ಕೋಟಿ ೫೦ ಕ್ಕೂ ಹೆಚ್ಚು ಸಕ್ರಿಯ ತೆರಿಗೆದಾರರು, ಜಿಎಸ್‌ಟಿ ಜಾರಿಯ ಯಶಸ್ಸನ್ನು ಪ್ರತಿಬಿಂಬಿಸುತ್ತಾರೆ.

<><*<><>*><>

ಹೈದರಾಬಾದ್ ಬಳಿಯ ಪಶಮೈಲಾರಂನಲ್ಲಿರುವ ಕೈಗಾರಿಕಾ ಘಟಕದಲ್ಲಿ ಇಂದು ಸಂಭವಿಸಿದ ಬೃಹತ್ ಸ್ಫೋಟದಲ್ಲಿ ೧೨ ಕಾರ್ಮಿಕರು ಸಾವನ್ನಪ್ಪಿದ್ದು, ಇತರೆ ೨೬ ಕಾರ್ಮಿಕರು ಗಾಯಗೊಂಡಿದ್ದಾರೆ. ಕೈಗಾರಿಕಾ ಪ್ರದೇಶದ ಸಿಗಾಚಿ ರಾಸಾಯನಿಕ ಕಾರ್ಖಾನೆಯಲ್ಲಿ ಈ ಘಟನೆ ಸಂಭವಿಸಿದ್ದು, ಸ್ಫೋಟದ ಪರಿಣಾಮವಾಗಿ ಇಡೀ ಕಾರ್ಖಾನೆಯ ಆವರಣವನ್ನು ಬೆಂಕಿ ಆವರಿಸಿತ್ತು. ಸ್ಥಳಕ್ಕೆ ಧಾವಿಸಿದ ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ, ಗಾಯಗೊಂಡವರನ್ನು ರಕ್ಷಿಸಿ, ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಿದ್ದಾರೆ. ಅಗ್ನಿ ಅವಘಡದಲ್ಲಿ ಮೃತಪಟ್ಟ ಕಾರ್ಮಿಕರ ಕುಟುಂಬಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ಮೃತರ ಕುಟುಂಬಗಳಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ ತಲಾ ೨ ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ ತಲಾ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

<><*<><>*><>

ಕೇಂದ್ರ ಸಹಕಾರ ಸಚಿವ ಅಮಿತ್ ಶಾ ನವದೆಹಲಿಯಲ್ಲಿ ನಡೆಯುತ್ತಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಹಕಾರ ಸಚಿವರ ಮಂಥನ ಬೈಠಕ್ ಅಧ್ಯಕ್ಷತೆ ವಹಿಸಿದ್ದಾರೆ. ಈ ಕಾರ್ಯಕ್ರಮವು ಪ್ರಗತಿಯನ್ನು ಪರಿಶೀಲಿಸಲು, ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲು ಮತ್ತು ಸಹಕಾರಿ ವಲಯವನ್ನು ಬಲಪಡಿಸುವ ಸಾಮೂಹಿಕ ಗುರಿಯನ್ನು ಸಾಧಿಸಲು ಮುಂದಿನ ಮಾರ್ಗವನ್ನು ರೂಪಿಸಲು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಸಭೆಯಲ್ಲಿ, ಎರಡು ಲಕ್ಷ ಹೊಸ ಬಹುಪಯೋಗಿ ಪ್ರಾಥಮಿಕ ಕೃಷಿ ಸಾಲ ಸಂಘಗಳ ಸ್ಥಾಪನೆ ಮತ್ತು ಕೊನೆಯ ಹಂತದ ಗ್ರಾಮೀಣ ಸೇವಾ ವಿತರಣೆಯನ್ನು ಬಲಪಡಿಸಲು ಡೈರಿ ಮತ್ತು ಮೀನುಗಾರಿಕಾ ಸಹಕಾರಿ ಸಂಘಗಳ ಸ್ಥಾಪನೆ ಸೇರಿದಂತೆ ಎಲ್ಲಾ ಪ್ರಮುಖ ಉಪಕ್ರಮಗಳನ್ನು ಚರ್ಚಿಸಲಾಗುವುದು. ಆಹಾರ ಭದ್ರತೆ ಮತ್ತು ರೈತರ ಸಬಲೀಕರಣವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಸಹಕಾರಿ ವಲಯದಲ್ಲಿ ವಿಶ್ವದ ಅತಿದೊಡ್ಡ ಧಾನ್ಯ ಸಂಗ್ರಹ ಯೋಜನೆಯ ಕುರಿತು ಚರ್ಚೆಯೂ ನಡೆಯಲಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಅನುಭವಗಳು, ಉತ್ತಮ ಅಭ್ಯಾಸಗಳು ಮತ್ತು ರಚನಾತ್ಮಕ ಸಲಹೆಗಳ ವಿನಿಮಯವನ್ನು ಸುಗಮಗೊಳಿಸುವುದು ಮಂಥನ ಬೈಠಕ್‌ನ ಪ್ರಾಥಮಿಕ ಉದ್ದೇಶವಾಗಿದೆ.

<><*<><>*><>

ಆಸಿಯಾನ್ ರಾಷ್ಟ್ರಗಳನ್ನು ಕ್ರೂಸ್ ಮೂಲಕ ಸಂಪರ್ಕಿಸುವ ದೇಶದಲ್ಲಿ ಐದು ಸಾವಿರ ಕಿಲೋಮೀಟರ್ ನೌಕಾಯಾನ ಜಲಮಾರ್ಗಗಳನ್ನು ವೃತ್ತಿಪರಗೊಳಿಸುವ ಚಿಂತನೆಯನ್ನು ಕೇಂದ್ರ ಸರ್ಕಾರ ಹೊಂದಿದೆ

ಎಂದು ಕೇಂದ್ರ ಹಡಗು ಮತ್ತು ಜಲಮಾರ್ಗ ಸಚಿವ ಸರ್ಬಾನಂದ ಸೋನೋವಾಲ್ ತಿಳಿಸಿದ್ದಾರೆ. ಮೊದಲ ಆಸಿಯಾನ್- ಭಾರತ ಕ್ರೂಸ್ ಸಂವಾದ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು, ೨೦೨೯ರಲ್ಲಿ ಒಂದು ದಶಲಕ್ಷ ಪ್ರಯಾಣಿಕರ ಗುರಿಯನ್ನು ಹೊಂದಿರುವ 'ಸಾಗರ್ ಮಾಲಾ' ಕೇಂದ್ರ ಸರ್ಕಾರದ ಉಪಕ್ರಮವಾಗಿದೆ. ೨೦೧೪ ರಲ್ಲಿ ಒಟ್ಟು ೧೦೨ ಕ್ರೂಸ್‌ಗಳಿದ್ದು, ಇದೀಗ ಈ ಸಂಖ್ಯೆ ೧೪ ಸಾವಿರದ ೨೭೨ ಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು. ಕಳೆದ ೧೧ ವರ್ಷಗಳಲ್ಲಿ ನೀತಿ, ಶಾಸನ, ತೆರಿಗೆ ಮತ್ತು ಮೂಲಸೌಕರ್ಯ ಸುಧಾರಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು, ಹಲವಾರು ಉಪಕ್ರಮಗಳನ್ನು ತೆಗೆದುಕೊಂಡಿದೆ ಎಂದು ಸಚಿವ ಸರ್ಬಾನಂದ ಸೋನೋವಾಲ್ ಹೇಳಿದರು.

**<><*<><>*><>**

ಭಾರತ ಮತ್ತು ಭೂತಾನ್ ನಡುವಿನ ಶಾಶ್ವತ ರಕ್ಷಣಾ ಸಹಕಾರವನ್ನು ಮತ್ತಷ್ಟು ಹೆಚ್ಚಿಸಲು ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಇಂದು ಭೂತಾನ್‌ಗೆ ನಾಲ್ಕು ದಿನಗಳ ಅಧಿಕೃತ ಭೇಟಿಯನ್ನು ಕೈಗೊಂಡಿದ್ದಾರೆ.

**<><*<>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<>*><>**

**<><*<>**ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ **<>*><>**